# ವಿದ್ಯುತ್ ಪರಿವೀಕ್ಷಣಾಲಯ

## ಆಡಳಿತ ವರದಿ

## 2009-10

# ಸೂಚಿಕೆ


**ಮುನ್ನುಡಿ:** ........ 1

**ಇಲಾಖಾ ಧ್ಯೇಯೋದ್ದೇಶಗಳು:** ........ 1

**ಇಲಾಖಾ ಕರ್ತವ್ಯಗಳು:** ........ 1

**ಇಲಾಖೆಯ ಬಗ್ಗೆ:** ........ 2

**ಕಾರ್ಯನಿರ್ವಹಣೆ ಬಗ್ಗೆ ಸಂಕ್ಷಿಪ್ತ ವರದಿ:** ........ 2

1. ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆಗಳ ಅನುಮೋದನೆಯ ಅಂಕಿ ಅಂಶಗಳು: ........ 2

2. ಭಾರತೀಯ ವಿದ್ಯುಚ್ಛಕ್ತಿ ನಿಯಮಗಳು 1956, ಕರ್ನಾಟಕ ಸಿನಿಮಾಟೊಗ್ರಫಿ ಕಾಯಿದೆ 1964 ಮತ್ತು ನಿಯಮಗಳು 1971 ಮತ್ತು ಕರ್ನಾಟಕ ಲಿಫ್ಟ್ ನಿಯಮಗಳು 1976ರ ಅಡಿಯಲ್ಲಿ ಕೈಗೊಂಡ ಪರಿವೀಕ್ಷಣೆಯ ವಿವರಗಳು. ........ 3

   2.1 ಪರಿವೀಕ್ಷಣೆ ಮಾಡಲಾದ ಸ್ಥಾವರಗಳ ಅಂಕಿ ಅಂಶಗಳು: ........ 3

   2.2 ಐ.ಪಿ.ಪಿ. (ಸ್ವತಂತ್ರ ವಿದ್ಯುತ್ ಉತ್ಪಾದಕ ಸ್ಥಾವರಗಳು) ವಿವರಗಳು: ........ 4

   2.3 ವಿದ್ಯುತ್ ಸ್ಥಾವರಗಳ ಅಂಕಿ ಅಂಶಗಳು 31-03-2010ರ ಅಂತ್ಯಕ್ಕೆ: ........ 5

**3. ರಾಜಸ್ವ ಕಂದಾಯ ಮತ್ತು ವೆಚ್ಚದ ವಿವರಣಾ ಪಟ್ಟಿ:** ........ 5

   3.1 2009-10ರ ರಾಜಸ್ವ ಕಂದಾಯ ವಸೂಲಾತಿಯ ವಿವರಗಳು. ........ 6

   3.2 ವಿದ್ಯುತ್ ಪರಿವೀಕ್ಷಣಾಲಯದ 2009-10 ಖರ್ಚು ವೆಚ್ಚಗಳ ವಿವರಗಳು: ........ 8

   ಖರ್ಚು ವೆಚ್ಚದ ವಿವರಗಳು - ಲೆಕ್ಕ ಶೀರ್ಷಿಕೆ ಓ.ಟಿ.ಡಿ. 2045-00-103-0-01 ........ 8

**4 ವಿದ್ಯುತ್ ಅಪಘಾತಗಳು:** ........ 9

   4.1 ವಿದ್ಯುತ್ ಅಪಘಾತಕ್ಕೆ ಕಾರಣಗಳು: ........ 9

   4.2 ವಿವಿಧ ರೀತಿಯ ವಿದ್ಯುತ್ ಸ್ಥಾವರಗಳಲ್ಲಿ ಮಾನವರಿಗೆ ಮತ್ತು ಪ್ರಾಣಿಗಳಿಗೆ ಸಂಭವಿಸಿದ ವಿದ್ಯುತ್ ಅಪಘಾತಗಳ ಅಂಕಿ ಅಂಶಗಳು: ........ 11

   4.3 ಕಳೆದ 8 ವರ್ಷಗಳಲ್ಲಿ ಸಂಭವಿಸಿದ ವಿದ್ಯುತ್ ಅಪಘಾತಗಳ ಅಂಕಿ ಅಂಶಗಳು. ........ 12

**5. ಪರವಾನಗಿ ಸಲಹಾ ಹಾಗೂ ಪರೀಕ್ಷಾ ಮಂಡಳಿ:** ........ 13

   5.1. ವಿದ್ಯುತ್ ಗುತ್ತಿಗೆದಾರರ ಅಂಕಿ ಅಂಶಗಳು ........ 13

   5.2 ವಿದ್ಯುತ್ ಮೇಲ್ವಿಚಾರಕರು (ಔದ್ಯಮಿಕ/ಗಣಿ) ಮತ್ತು ತಂತಿ ರಹದಾರಿಗಳ ಪರೀಕ್ಷೆ : ........ 13

   (5.2.1) ವಿದ್ಯುತ್ ಮೇಲ್ವಿಚಾರಕರು (ಔದ್ಯಮಿಕ) ಪರೀಕ್ಷೆ : ........ 14

   (5.2.2) ವಿದ್ಯುತ್ ಮೇಲ್ವಿಚಾರಕರು (ಗಣಿ) ಪರೀಕ್ಷೆ ........ 14

   (5.2.3) ತಂತಿ ರಹದಾರಿಗಳ ಪರೀಕ್ಷೆ:- ........ 14

ಕರ್ನಾಟಕ ಸರ್ಕಾರ

# (ವಿದ್ಯುತ್ ಪರಿವೀಕ್ಷಣಾಲಯ)

## ಆಡಳಿತ ವರದಿ 2009–10

**ಮುನ್ನುಡಿ:**

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯು ರಾಜ್ಯದ ಒಂದು ಸಂವಿಧಾನಕ ಕ್ಷೇತ್ರಿಯ ಇಲಾಖೆಯಾಗಿ 1957ನೇ ಇಸವಿ ಅಕ್ಟೋಬರ್ ತಿಂಗಳ ಒಂದರಂದು ಹಿಂದಿನ ವಿದ್ಯುಚ್ಚಕ್ತಿ ಕಾಯಿದೆ 1910ರಲ್ಲಿನ ಅವಕಾಶದಂತೆ ಭಾರತೀಯ ವಿದ್ಯಚ್ಚಕ್ತಿ ನಿಯಮಗಳು 1956ರ ರಚನೆಯ ನಂತರ ಕಾರ್ಯರೂಪಕ್ಕೆ ಬಂದಿರುತ್ತದೆ. ಮುಖ್ಯ ವಿದ್ಯುತ್ ಪರಿವೀಕ್ಷಕರು ಇಲಾಖೆಯ ಮುಖ್ಯಸ್ಥರಾಗಿದ್ದು, ಇಲಾಖೆಯು ಕರ್ನಾಟಕ ಸರ್ಕಾರದ ಇಂಧನ ಸಚಿವಾಲಯದ ಆಡಳಿತ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ.

ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಮುಖ್ಯಸ್ಥರಾಗಿದ್ದು ಜೊತೆಯಲ್ಲಿ, ಸರ್ಕಾರದ ಪದನಿಮಿತ್ತ ಅಪರ ಕಾರ್ಯದರ್ಶಿಗಳು (ಪರವಾನಗಿ) ಇಂಧನ ಇಲಾಖೆ, ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿಯ ಅಧ್ಯಕ್ಷರು, ಸಿನಿಮಾ ಆಪರೇಟರ್ ಪರೀಕ್ಷಾ ಮಂಡಳಿಯ ಅಧ್ಯಕ್ಷರು, ಬಿ.ಐ.ಎಸ್ ನ ಲಿಫ್ಟ್ ಮತ್ತು ಎಸ್ಕಲೇಟರ್‌ಗಳ ವಿಭಾಗೀಯ ಸಮಿತಿಯ (ETD 25) ಸದಸ್ಯರು, ರಾಜ್ಯ ಲಿಫ್ಟ್‌ಗಳ ಪರಿವೀಕ್ಷಕರು ಹಾಗೂ ಸರ್ಕಾರಕ್ಕೆ ವಿದ್ಯುಚ್ಚಕ್ತಿಯ ವಿಷಯದ ಬಗ್ಗೆ ಸಲಹೆಗಾರರು ಆಗಿರುತ್ತಾರೆ.

**ಇಲಾಖಾ ಧ್ಯೇಯೋದ್ದೇಶಗಳು:**

ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಸ್ಥಾವರಗಳು ಭಾರತೀಯ ವಿದ್ಯುಚ್ಚಕ್ತಿ ನಿಯಮ 1956ರಂತೆ, ಸುರಕ್ಷತಾ ಕೋಡ್ ಮತ್ತು ಸ್ಟಾಂಡರ್ಡ್‌ಗಳಿಗೆ ಅನುಗುಣವಾಗಿರುವಂತೆ ಖಚಿತಪಡಿಸಿ ಕೊಳ್ಳುವುದು ಈ ಇಲಾಖೆಯ ಮುಖ್ಯ ಗುರಿಯಾಗಿರುತ್ತದೆ. ಮಾನವ, ಪ್ರಾಣಿ ಜೀವಕ್ಕೆ ಮತ್ತು ಆಸ್ತಿ ಪಾಸ್ತಿಗೆ ಹಾನಿಯಾಗದಂತೆ ಸುರಕ್ಷತೆಗಾಗಿ ಇರುವುದನ್ನು ಖಚಿತಪಡಿಸಿಕೊಳ್ಳುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ. ವಿದ್ಯುಚ್ಚಕ್ತಿಯ ಉತ್ಪಾದನೆ, ಪ್ರಸರಣಾ, ವಿತರಣೆ ಮತ್ತು ಬಳಕೆಯ ರಂಗಗಳಲ್ಲಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳುವುದು. ಭಾರತೀಯ ವಿದ್ಯುಚ್ಚಕ್ತಿ ಕಾನೂನು 1956, ವಿದ್ಯುಚ್ಚಕ್ತಿ ಕಾಯಿದೆ 2003, ಕರ್ನಾಟಕ ಲಿಫ್ಟ್ ಕಾಯಿದೆ 1974 ಮತ್ತು ಲಿಫ್ಟ್ ನಿಯಮ 1976, ಕರ್ನಾಟಕ ಸಿನಿಮಾಟೋಗ್ರಫಿ ಕಾಯಿದೆ 1964 ಮತ್ತು ನಿಯಮಗಳು 1971, ಕರ್ನಾಟಕ ವಿಡಿಯೋ ಕ್ಯಾಸೆಟ್ ರೆಕಾರ್ಡರ್ ಅಥವಾ ಲೇಸರ್ ಡಿಸ್ಕ್ ಗಳ ಮೂಲಕ ಟಿ.ವಿ ಪರದೆಯ ಮೇಲೆ ಚಿತ್ರಗಳ ಪ್ರದರ್ಶನ (ರೆಗ್ಯೂಲೇಷನ್) ನಿಯಮಗಳು, 1984 ಮತ್ತು ಕರ್ನಾಟಕ (ವಿದ್ಯುತ್ ಗುತ್ತಿಗೆದಾರರಿಗೆ ಪರವಾನಗಿ ನೀಡುವ ಮತ್ತು ವಿದ್ಯುತ್ ಮೇಲ್ವಿಚಾರಕರ (ಔದ್ಯಮಿಕ / ಗಣಿ) ಮತ್ತು ವಿದ್ಯುತ್ ತಂತಿ ಕೆಲಸಗಾರರಿಗೆ ಅರ್ಹತಾ ಪತ್ರ ರಹದಾರಿ ನೀಡುವಿಕೆ) ನಿಯಮಗಳು 1976ರ ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುವುದು. ಕರ್ನಾಟಕ ವಿದ್ಯುಚ್ಚಕ್ತಿ (ಬಳಕೆ ಮೇಲಣ ತೆರಿಗೆ) ಕಾಯಿದೆ 1959 ಮತ್ತು ನಿಯಮಗಳು 1959ರ ಪ್ರಕಾರ ಸರಬರಾಜುದಾರರಿಂದ /. ಕ್ಯಾಪ್ಟೀವ್ ಜನರೇಷನ್ ಸೇರಿದಂತೆ ಇತರರಿಂದ ಸ್ವೀಕೃತಗೊಂಡ ತೆರಿಗೆ ಪಾವತಿ ವಿವರಗಳನ್ನು ಪರಿಶೀಲಿಸುವುದು ಈ ಇಲಾಖೆಯ ಮತ್ತೊಂದು ಉದ್ದೇಶವಾಗಿರುತ್ತದೆ.

**ಇಲಾಖಾ ಕರ್ತವ್ಯಗಳು:**

ಕೇಂದ್ರ ಹಾಗೂ ರಾಜ್ಯಗಳ ವಿವಿಧ ಕಾಯಿದೆ ಮತ್ತು ನಿಯಮಗಳ ಪ್ರಕಾರ ಇಲಾಖೆಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತದೆ.

1) ಕ.ವಿ.ಪ್ರ.ನಿ.ನಿ, ವಿ.ವಿ.ಎನ್.ಎಲ್. ಸ್ವತಂತ್ರ ವಿದ್ಯುತ್ ಉತ್ಪಾದಕರ (ಹೈಡ್ರೋ, ಥರ್ಮಲ್ ವಿಂಡ್, ಡೀಸೆಲ್, ಕೋ–ಜನರೇಷನ್, ಬಯೋ–ಮಾಸ್, ಇತರೆ) ಸರಬರಾಜುದಾರರ / ಲೈಸೆನ್ಸ್‌ದಾರರ ವಿತರಣಾ ಕೇಂದ್ರ ಹಾಗೂ ಮಾರ್ಗ, ವಿದ್ಯುತ್ ಸರಬರಾಜುದಾರ ಕಂಪನಿಗಳ ವಿತರಣಾ ಕೇಂದ್ರ ಹಾಗೂ ಮಾರ್ಗ, ಇಹೆಚ್‌ಟಿ, ಹೆಚ್‌ಟಿ, ವಿದ್ಯುಜ್ಜನಕ (ಸಿ.ಜಿ./ಡಿ.ಜಿ/ಟಿ.ಜಿ), 15 ಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ಎತ್ತರದ ಬಹುಮಹಡಿ ಕಟ್ಟಡ, ಲಿಫ್ಟ್ ಮತ್ತು ಎಸ್ಕಲೇಟರ್, ಮತ್ತು ಸಿನಿಮಾ ವಿದ್ಯುತ್ ಸ್ಥಾವರಗಳ ರೇಖಾ ಚಿತ್ರಗಳ ಪರಿಶೀಲನೆ ಹಾಗೂ ಅನುಮೋದನೆ ಕೊಡುವುದು.

2) ಮೇಲ್ಕಂಡ ವಿದ್ಯುತ್ ಸ್ಥಾವರಗಳ ಹಾಗೂ ಕ್ಷ–ಕಿರಣ ನಿಯಾನ್‌ಸೈನ್ ಮತ್ತು ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪ್ರಾಥಮಿಕ ಪರಿವೀಕ್ಷಣೆ ಮಾಡಿ ಸುರಕ್ಷತಾ ನಿಯಮಗಳಿಗೆ ಒಳಪಟ್ಟಿದ್ದಲ್ಲಿ ಚಾಲನೆಗೊಳಿಸಲು ಅನುಮೋದನೆ ಕೊಡುವುದು ಹಾಗೂ ಕಾಲಕಾಲಕ್ಕೆ ಮೇಲ್ಕಂಡ ವಿದ್ಯುತ್ ಸ್ಥಾವರಗಳ ಮತ್ತು ಮಧ್ಯಮ ಒತ್ತಡ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆ ನಡೆಸುವುದು.

3) ವಿದ್ಯುತ್ ಅಪಘಾತಗಳ ತನಿಖೆ ನಡೆಸಿ, ಅಪಘಾತ ತಡೆಯುವ ಸಲಹೆಗಳೊಂದಿಗೆ ಸರ್ಕಾರಕ್ಕೆ ವರದಿ ಮಾಡುವುದು. ವಿದ್ಯುತ್ ಸರಬರಾಜುದಾರರು ಮತ್ತು ಲೈಸೆನ್ಸಿಗಳೊಂದಿಗೆ ವಿದ್ಯುತ್ ಅಪಘಾತಗಳನ್ನು ತಡೆಯುವ ಬಗ್ಗೆ ವ್ಯವಹರಿಸುವುದು.

4) ವಿದ್ಯುತ್ ಗುತ್ತಿಗೆದಾರರು ಮತ್ತು ಗ್ರಾಹಕರ ನಡುವಿನ ವ್ಯಾಜ್ಯಗಳನ್ನು ತೀರ್ಮಾನಿಸುವುದು ಹಾಗೂ ಕಾನೂನು ಮತ್ತು ನಿಯಮಗಳ ಅನ್ವಯ ಕ್ರಮ ಕೈಗೊಳ್ಳುವುದು.

5) ವಿದ್ಯುತ್ ಸರಬರಾಜುದಾರರು / ಲೈಸೆನ್ಸಿಗಳಿಂದ ವಸೂಲಾದ ತೆರಿಗೆ ಮತ್ತು ಸ್ವವಿದ್ಯುತ್ ಮೇಲೆ ವಸೂಲಾದ ವಿದ್ಯುತ್ ತೆರಿಗೆಗಳ ಲೆಕ್ಕಾಚಾರ ಮತ್ತು ವಸೂಲಿ ಬಗ್ಗೆ ಕ್ರಮ ಕೈಗೊಳ್ಳುವುದು.

6) ವಿದ್ಯುತ್ ಗುತ್ತಿಗೆದಾರರಿಗೆ, ಸೂಪರ್ ವೈಸರ್‌ಗಳಿಗೆ, ವೈರ್‌ಮನ್‌ಗಳಿಗೆ ಮತ್ತು ವಿಶೇಷ ವೈರ್‌ಮನ್ ಪರ್ಮಿಟ್‌ಗಳಿಗೆ ಹೊಸ ಲೈಸೆನ್ಸ ನೀಡುವುದು ಮತ್ತು ನವೀಕರಣಗೊಳಿಸುವುದು. ಔದ್ಯಮಿಕ ಮತ್ತು ಗಣಿ ಪರ್ಯವೇಕ್ಷಕರ ಮತ್ತು ತಂತಿಕರ್ಮಿಗಳ ಪರೀಕ್ಷೆ ನಡೆಸುವುದು.

7) ಸಿನಿಮಾ ಆಪರೇಟರ್‌ಗಳಿಗೆ ಪರ್ಮಿಟ್ ನೀಡಲು ಪರೀಕ್ಷೆ ನಡೆಸುವುದು ಮತ್ತು ಪರ್ಮಿಟ್ ನೀಡುವುದು.

**ಇಲಾಖೆಯ ಬಗ್ಗೆ:**

ನಿರಸನಗೊಂಡ ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 1910ರ ಸೆಕ್ಷನ್ 36 ಮತ್ತು ಭಾರತೀಯ ವಿದ್ಯುಚ್ಛಕ್ತಿ ನಿಯಮ 2003ರ ಸೆಕ್ಷನ್ 162 ಪ್ರಕಾರ ನೇಮಕ ಗೊಂಡಿರುವ ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಅದರ ಮುಖ್ಯ ಕಚೇರಿಯು #32/1–2, 2ನೇ ಮಹಡಿ, ಕ್ರೆಸೆಂಟ್ ಟವರ್ಸ್, ಕ್ರೆಸೆಂಟ್ ರೋಡ್, ಬೆಂಗಳೂರು 560 001 ರಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ.

ಆಡಳಿತ, ಕಾಯಿದೆ ಹಾಗೂ ನಿಯಮಗಳಲ್ಲಿ ಸೂಚಿಸಿರುವಂತೆ ಕಾರ್ಯರೂಪಕ್ಕೆ ತರುವಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ 7 ಜನ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, 21 ವಿದ್ಯುತ್ ಪರಿವೀಕ್ಷಕರು, 41 ಉಪ ವಿದ್ಯುತ್ ಪರಿವೀಕ್ಷಕರು, 72 ಸಹಾಯಕ ವಿದ್ಯುತ್ ಪರಿವೀಕ್ಷಕರು, ಒಬ್ಬರು ಲೆಕ್ಕಾಧಿಕಾರಿ, ಒಬ್ಬರು ವ್ಯವಸ್ಥಾಪಕರು, 12 ಅಧೀಕ್ಷಕರು ಮತ್ತು 134 ಇತರ ಸಿಬ್ಬಂದಿಗಳು ಸಹಕರಿಸುತ್ತಿರುತ್ತಾರೆ.

**ಕಾರ್ಯನಿರ್ವಹಣೆ ಬಗ್ಗೆ ಸಂಕ್ಷಿಪ್ತ ವರದಿ:**

**1. ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆಗಳ ಅನುಮೋದನೆಯ ಅಂಕಿ ಅಂಶಗಳು:**

ಭಾರತೀಯ ವಿದ್ಯುಚ್ಛಕ್ತಿ ನಿಯಮಗಳು 1956, ಕರ್ನಾಟಕ ಸಿನಿಮಾಟೊಗ್ರಫಿ ಕಾಯ್ದೆ 1964 ಮತ್ತು ನಿಯಮಗಳು 1971, ಹಾಗೂ ಕರ್ನಾಟಕ ಲಿಫ್ಟ್ ಕಾಯ್ದೆ 1974 ಮತ್ತು ನಿಯಮಗಳು 1976ರ ಅಡಿಯಲ್ಲಿ



1–04–2009 ರಿಂದ 31–03–2010 ರವರೆಗೆ ಇಲಾಖೆಯು ಅನುಮೋದಿಸಿದ ವಿವಿಧ ವಿದ್ಯುತ್ ಸ್ಥಾವರಗಳ ನೀಲಿನಕ್ಷೆಗಳ ಅಂಕಿ ಅಂಶಗಳ ಸಂಕ್ಷಿಪ್ತ ವಿವರಗಳು ಕೆಳಕಂಡಂತೆ ಇರುತ್ತವೆ.

| ಕ್ರಮ ಸಂಖ್ಯೆ | ಸ್ಥಾವರಗಳ ವಿವರ | ಸಂಖ್ಯೆ |
|---|---|---|
| 1 | ವಿತರಣಾ ಕೇಂದ್ರ / ಇಹೆಚ್‌ಟಿ/ಹೆಚ್‌ಟಿ/ ಪರಿವರ್ತಕಗಳು | **1390** |
| 2. | ಸಿಜಿ/ಡಿಜಿ/ಟಿ.ಜಿ. ಸೆಟ್ ಗಳು ಮತ್ತು ಉತ್ಪಾದನ ಕೇಂದ್ರಗಳು | **5748** |
| 3. | ಬಹುಅಂತಸ್ತಿನ ಕಟ್ಟಡಗಳ ವಿದ್ಯುತ್ ಸ್ಥಾವರಗಳು | **1100** |
| 4. | ಸಿನಿಮಾ ಕಟ್ಟಡದ ವಿದ್ಯುತ್ ಸ್ಥಾವರಗಳ | **9** |
| 5. | ಇತರೆ | **5795** |
| 6. | ಲಿಫ್ಟ್ | **3098** |

**2. ಭಾರತೀಯ ವಿದ್ಯುಚ್ಛಕ್ತಿ ನಿಯಮಗಳು 1956, ಕರ್ನಾಟಕ ಸಿನಿಮಾಟೊಗ್ರಫಿ ಕಾಯಿದೆ 1964 ಮತ್ತು ನಿಯಮಗಳು 1971 ಮತ್ತು ಕರ್ನಾಟಕ ಲಿಫ್ಟ್ ನಿಯಮಗಳು 1976ರ ಅಡಿಯಲ್ಲಿ ಕೈಗೊಂಡ ಪರಿವೀಕ್ಷಣೆಯ ವಿವರಗಳು.**

ವಿದ್ಯುತ್ ಪರಿವೀಕ್ಷಣಾ ಇಲಾಖೆಯ ತಾಂತ್ರಿಕ ಸಿಬ್ಬಂಧಿಯವರು ಭಾರತೀಯ ವಿದ್ಯುಚಕ್ತಿ ನಿಯಮ 1956, ಕರ್ನಾಟಕ ಸಿನಿಮಾ ಕಾಯಿದೆ 1964 ಮತ್ತು ನಿಯಮಗಳು 1971 ಮತ್ತು ಕರ್ನಾಟಕ ಲಿಫ್ಟ್ ನಿಯಮಗಳು 1976ರ ಅಡಿಯಲ್ಲಿ 1–4–2009 ರಿಂದ 31–3–2010 ರವರೆಗೆ ಕೈಗೊಂಡ ಪ್ರಾಥಮಿಕ ಮತ್ತು ನಿಯತಕಾಲಿಕ ಪರಿವೀಕ್ಷಣೆಯ ವಿವರಗಳು ಕೆಳಕಂಡಂತೆ ಇರುತ್ತದೆ.

**2.1 ಪರಿವೀಕ್ಷಣೆ ಮಾಡಲಾದ ಸ್ಥಾವರಗಳ ಅಂಕಿ ಅಂಶಗಳು:**

| ವಿವರಗಳು | | ಪ್ರಾಥಮಿಕ ಪರಿವೀಕ್ಷಣೆ | ನಿಯತಕಾಲಿಕ ಪರಿವೀಕ್ಷಣೆ |
|---|---|---|---|
| ಉತ್ಪಾದನ ಕೇಂದ್ರಗಳು (ಘಟಕಗಳು) | | **183** | **1914** |
| ವಿತರಣಾ ಕೇಂದ್ರಗಳು | | **96** | **112** |
| ಎಸ್ಕಾಂಗಳ ಪರಿವರ್ತಕ ಕೇಂದ್ರಗಳು | | **15305** | **791** |
| ವಿತರಣಾ ಮಾರ್ಗಗಳು (ಕಿ.ಮೀ.ಗಳಲ್ಲಿ) | | **610.78** | **471.5** |
| | | **6451.14** | **560.85** |
| | | **2326.1** | **412.76** |
| ಅಧಿಕ ಒತ್ತಡ ಸ್ಥಾವರಗಳು | | **1213** | **9013** |
| ಮದ್ಯಮ ಒತ್ತಡ ಸ್ಥಾವರಗಳು | | **14** | **2910** |

| ವಿವರಗಳು | | ಪ್ರಾಥಮಿಕ ಪರಿವೀಕ್ಷಣೆ | ನಿಯತಕಾಲಿಕ ಪರಿವೀಕ್ಷಣೆ |
|---|---|---|---|
| ಸಿನಿಮಾಗಳು | ಖಾಯಂ | 6 | 124 |
| | ಅರೆಖಾಯಂ | 7 | 83 |
| | ಸಂಚಾರಿ | 5 | 90 |
| ವಿದ್ಯುಜ್ಜನಕಗಳು | | 5618 | 23428 |
| ಲಿಫ್ಟ್ ಗಳು | | 2425 | 9319 |
| ಕ್ಷ–ಕಿರಣಗಳು | | 8 | 661 |
| ನಿಯಾನ್ ಚಿಹ್ನೆಗಳು | | 0 | 61 |
| ವಿಡಿಯೋ ಕೇಂದ್ರಗಳು | | 7 | 74 |
| ಬಹುಅಂತಸ್ತಿನ ಕಟ್ಟಡಗಳು | | 814 | 3108 |
| ಸೇರ್ಪಡೆಗಳು ಮತ್ತು ಬದಲಾವಣೆಗಳು | | ---- | --- |

2009–10ನೇ ಸಾಲಿನಲ್ಲಿ 183 ಸಂಖ್ಯೆಯ ಹೊಸ ಸ್ವತಂತ್ರ ವಿದ್ಯುತ್ ಉತ್ಪಾದಕ ಘಟಕಗಳನ್ನು ಪರಿವೀಕ್ಷಣೆ ಮಾಡಿ ಅನುಮೋದನೆ ನೀಡಲಾಗಿರುತ್ತದೆ. ಸದರಿ ವಿದ್ಯುತ್ ಸ್ಥಾವರಗಳ ಸಾಮರ್ಥ್ಯ ಮತ್ತು ಹಾಲಿ ಇರುವ ವಿದ್ಯುತ್ ಸ್ಥಾವರಗಳ ಸಾಮರ್ಥ್ಯ ಕೆಳಕಂಡಂತೆ ಇರುತ್ತದೆ.

**2.2 ಐ.ಪಿ.ಪಿ. (ಸ್ವತಂತ್ರ ವಿದ್ಯುತ್ ಉತ್ಪಾದಕ ಸ್ಥಾವರಗಳು) ವಿವರಗಳು:**

| ಕೋಜನರೇಷನ್ ಸ್ಥಾವರಗಳು | |
|---|---|
| ಹಾಲಿ ಇರುವ 33 ಸಂಖ್ಯೆಯ ಸ್ಥಾವರಗಳು | **595.35** ಮೆ.ವ್ಯಾ |
| 5 ಸಂಖ್ಯೆಯ ಹೊಸ ಸ್ಥಾವರಗಳು (10 ಘಟಕಗಳು) | **123.3** ಮೆ. ವ್ಯಾ |
| ಒಟ್ಟು | **710.65** ಮೆ.ವ್ಯಾ |
| **ಸಣ್ಣ/ ಅತಿ ಸಣ್ಣ ಹೈಡಲ್ ಘಟಕಗಳು** | |
| ಹಾಲಿ ಇರುವ 47 ಸಂಖ್ಯೆಯ ಸ್ಥಾವರಗಳು | **392.525** ಮೆ.ವ್ಯಾ |
| 5 ಸಂಖ್ಯೆಯ ಹೊಸ ಸ್ಥಾವರಗಳು (28 ಘಟಕಗಳು) | **131** ಮೆ. ವ್ಯಾ |
| ಒಟ್ಟು | **523.525** ಮೆ.ವ್ಯಾ |
| **ಥರ್ಮಲ್ (ಬಯೋ–ಮಾಸ್)** | |
| ಹಾಲಿ ಇರುವ 20 ಸಂಖ್ಯೆಯ ಸ್ಥಾವರಗಳು | **931.0+28.16=959.16** ಮೆ.ವ್ಯಾ |
| 6 ಸಂಖ್ಯೆಯ ಹೊಸ ಸ್ಥಾವರಗಳು (9 ಘಟಕಗಳು) | **721.945** ಮೆ.ವ್ಯಾ |
| ಒಟ್ಟು | **1681.105** ಮೆ.ವ್ಯಾ |



| ವಿಂಡ್ ಮಿಲ್ ಪವರ್ ಪ್ರಾಜೆಕ್ಟ್ | |
|---|---|
| ಹಾಲಿ ಇರುವ 1609 ಸಂಖ್ಯೆಯ ಘಟಕಗಳು | **1305.155+0.75=1303.905** ಮೆ.ವ್ಯಾ |
| 136ಸಂಖ್ಯೆಯ ಹೊ ಸ ಘಟಕಗಳು | **157.05** ಮೆ. ವ್ಯಾ |
| ಒಟ್ಟು | **1460.955** ಮೆ. ವ್ಯಾ |

**2.3 ವಿದ್ಯುತ್ ಸ್ಥಾವರಗಳ ಅಂಕಿ ಅಂಶಗಳು 31–03–2010 ರ ಅಂತ್ಯಕ್ಕೆ:**

| ವಿವರಗಳು | | ಸ್ಥಾವರಗಳ ಅಂಕಿ ಅಂಶಗಳು |
|---|---|---|
| ಉತ್ಪಾದನ ಕೇಂದ್ರಗಳು<br>(ಎ) ಸರ್ಕಾರಿ ಸ್ವಾಮ್ಯದ<br>(ಬಿ) ಖಾಸಗಿ (ಘಟಕಗಳು) | | 27<br>1939 |
| ವಿತರಣಾ ಕೇಂದ್ರಗಳು | | 1250 |
| ಕ.ವಿ.ಪ್ರ.ನಿ.ನಿ. ಪರಿವರ್ತಕ ಕೇಂದ್ರಗಳು | | 331648 |
| ವಿತರಣಾ ಮಾರ್ಗಗಳು (ಕಿ.ಮೀ.ಗಳಲ್ಲಿ) | ಇ.ಹೆಚ್.ವಿ. | 28483.47 |
| | ಹೆಚ್. ವಿ. | 208992.962 |
| | ಎಂ.ವಿ. | 435031.771 |
| ಅಧಿಕ ಒತ್ತಡ ಸ್ಥಾವರಗಳು | | 11237 |
| ಮದ್ಯಮ ಒತ್ತಡ ಸ್ಥಾವರಗಳು | | 250539 |
| ಸಿನಿಮಾಗಳು | ಖಾಯಂ | 635 |
| | ಅರೆಖಾಯಂ | 176 |
| | ಸಂಚಾರಿ | 195 |
| ವಿದ್ಯುಜ್ಜನಕಗಳು | | 35183 |
| ಲಿಫ್ಟ್ ಗಳು | | 16680 |
| ಕ್ಷ–ಕಿರಣಗಳು | | 731 |
| ನಿಯಾನ್ ಚಿಹ್ನೆಗಳು | | 90 |
| ವಿಡಿಯೋ ಕೇಂದ್ರಗಳು | | 121 |
| ಬಹುಅಂತಸ್ತಿನ ಕಟ್ಟಡಗಳು | | 4266 |

**2. ರಾಜಸ್ವ ಕಂದಾಯ ಮತ್ತು ವೆಚ್ಚದ ವಿವರಣಾ ಪಟ್ಟಿ:**

ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಸ್ಥಾವರಗಳು ಸುರಕ್ಷತೆಯಾಗಿರುವ ಉದ್ದೇಶದಿಂದ ಸದರಿ ಸ್ಥಾವರಗಳನ್ನು ಪ್ರಾಥಮಿಕವಾಗಿ ಮತ್ತು ನಿಯತಕಾಲಿಕವಾಗಿ ಪರಿವೀಕ್ಷಣೆ ಮಾಡಿ ರಾಜ್ಯ ಸರ್ಕಾರವು ನಿಗಧಿಪಡಿಸಿದ ಪರಿವೀಕ್ಷಣಾ ಶುಲ್ಕವನ್ನು ವಸೂಲಿ ಮಾಡಲಾಗುತ್ತಿರುತ್ತದೆ. ಬಳಕೆದಾರರು ಬಳಸುವ ವಿದ್ಯುತ್‌ನ ಬಿಲ್ ಮೊತ್ತದ ಮೇಲೆ ಶೇ. 5 ರಂತೆ ವಿದ್ಯುತ್ ತೆರಿಗೆಯನ್ನು ವಿಧಿಸಿ ಸರಬರಾಜುದಾರರ ಮುಖಾಂತರ ವಸೂಲಿ ಮಾಡಲಾಗುತ್ತಿದೆ. ಈ ರೀತಿ

ವಸೂಲಾಗುವ ತೆರಿಗೆ ಸಂಬಂಧಪಟ್ಟ ನಮೂನೆಗಳನ್ನು ಮತ್ತು ಪುಸ್ತಕಗಳನ್ನು ಪರಿಶೀಲಿಸಿ ಕರ್ನಾಟಕ ವಿದ್ಯುಚ್ಚಕ್ತಿ (ಬಳಕೆ ಮೇಲಿನ ತೆರಿಗೆ) ಕಾಯಿಧೆ ಮತ್ತು ನಿಯಮಗಳು 1959ರ ಪ್ರಕಾರ ಇರುವುದೇ ಎಂಬುದನ್ನು ಗಮನಿಸಲಾಗುತ್ತದೆ.


**3.1 2009–10 ರ ರಾಜಸ್ವ ಕಂದಾಯ ವಸೂಲಾತಿಯ ವಿವರಗಳು.**

| ಕ್ರಮ ಸಂಖ್ಯೆ | ವಿವರಗಳು | 2009–10ರ ವಸೂಲಿ ರೂ.ಗಳಲ್ಲಿ |
|---|---|---|
| 1. | ವಿದ್ಯುತ್ ಮೇಲಣ ತೆರಿಗೆ | 499,85,08,379 |
| 2. | ಸರ್ಕಾರದ ಆದೇಶದ ಸಂ: ಇಎನ್ 33 ಪಿಎಸ್ಆರ್ 2008 ಬೆಂಗಳೂರು, ದಿ:31.03.2009ರ ಮೇರೆಗೆ ತ್ರಿಪಕ್ಷಣೀಯ ಹೊಂದಾಣಿಕೆ ಮೂಲಕ ತೆರಿಗೆಯನ್ನು ಸರ್ಕಾರಕ್ಕೆ ಜಮೆ ಮಾಡಲಾಗಿರುತ್ತದೆ. (ಕೆ.ಪಿ.ಸಿ.ಎಲ್–4.50, ಮೆಸ್ಕಾಂ–24.74, ಸೆಸ್ಕ–20.53, ಹೆಸ್ಕಾಂ–54.00 ಮತ್ತು ಜೆಸ್ಕಾಂ –48.70 ಕೋಟಿಗಳು) | 152,47,00,000 |
| | **ಒಟ್ಟು–1** | **652,32,08,379** |
| 1. | ಐ.ಇ. ರೂಲ್ಸ್ ನ ಅಡಿಯಲ್ಲಿ ಪರಿವೀಕ್ಷಣಾ ಶುಲ್ಕ | 25,20,66,190 |
| 2. | ಸಿನಿಮಾ ಪರಿವೀಕ್ಷಣೆ | 4,89,084 |
| | ಇತರೆ ಬಾಬ್ತುಗಳು | |
| 3. | ಲೈಸೆನ್ಸ್ ಮತ್ತು ಪರ್ಮಿಟ್ ಗಳು ನವೀಕರಣ | 40,42,711 |
| 4. | ಲಿಫ್ಟ್ ಕಾಯಿದೆಯಡಿ ಪರಿವೀಕ್ಷಣಾ ಶುಲ್ಕ | 79,16,055 |
| 5. | ಇತರೆ | 14,31,323 |
| 6. | ಹೆಚ್ಚುವರಿ ಪಾವತಿ ಮತ್ತು ಜಮಾ | 1,441 |
| 7. | ರಜೆ ಬಾಬ್ತು ಪಾವತಿ | ––– |
| 8. | ಪರೀಕ್ಷಾ ಶುಲ್ಕ | 9,8460 |
| 9. | 007–ಕಾಪೌಂಡಿಂಗ್ ಶುಲ್ಕ | 38,51,775 |
| | **ಒಟ್ಟು–2** | **26,98,97,039** |
| | **ಒಟ್ಟು (1+2)** | **6,79,31,05,418** |
| | (–) | **62,10,878** |
| | **ಒಟ್ಟು** | **6,78,68,94,540** |



**2002–03 ರಿಂದ 2009–10 ರವರೆಗಿನ ರಾಜಸ್ವ ಕಂದಾಯದ ತುಲನಾತ್ಮಕ ವರದಿ**

| ಕ್ರಮ ಸಂಖ್ಯೆ | ವಾರ್ಷಿಕ ವಿವರ | ಒಟ್ಟು ವಸೂಲಾತಿ ರೂ.ಗಳಲ್ಲಿ |
|---|---|---|
| 1. | 2002–03 | 175,40,11,642 |
| 2. | 2003–04 | 272,92,48,776 |
| 3. | 2004–05 | 339,03,45,031 |
| 4. | 2005–06 | 277,08,74,997 |
| 5. | 2006–07 | 345,80,46,402 |
| 6. | 2007–08 | 440,02,05,555 |
| 7. | 2008–09 | 370,59,40,686 |
| 8. | 2009–10 | 678,68,94,540 |



### 3.2 ವಿದ್ಯುತ್ ಪರಿವೀಕ್ಷಣಾಲಯದ 2009-10 ಖರ್ಚು ವೆಚ್ಚಗಳ ವಿವರಗಳು:


**ಖರ್ಚು ವೆಚ್ಚದ ವಿವರಗಳು – ಲೆಕ್ಕ ಶೀರ್ಷಿಕೆ ಓ.ಟಿ.ಡಿ. 2045-00-103-0-01**

| ಕ್ರಮ ಸಂಖ್ಯೆ | ವಿವರಗಳು | | ಒಟ್ಟು ಮೊತ್ತ ರೂ.ಗಳಲ್ಲಿ |
|---|---|---|---|
| 1. | ವೇತನ | ಅಧಿಕಾರಿಗಳು | 1,44,75,099 |
| 2. | | ಸಿಬ್ಬಂದಿ | 1,78,92,896 |
| 3. | ಮಧ್ಯಂತರ ಪರಿಹಾರ | | ---- |
| 4 | ತುಟ್ಟಿ ಭತ್ಯೆ | | 1,16,98,654 |
| 5. | ಇತರೆ ಭತ್ಯೆ | | 49,73,017 |
| 6. | ಪೂರಕ ವೆಚ್ಚ | | 28,672 |
| 7. | ವೈಧಕೀಯ ವೆಚ್ಚ | | 59,956 |
| 8. | ವೈಧಕೀಯ ವೆಚ್ಚದ ಮರುಪಾವತಿ | | 6,29,486 |
| 9. | ಪ್ರಯಾಣ ಭತ್ಯೆ | | 11,15,786 |
| 10. | ಸಾಮಾನ್ಯ ವೆಚ್ಚ | | 1037716 |
| 11. | ಕಟ್ಟಡ ವೆಚ್ಚಗಳು | | 55,99,346 |
| 12. | ಸಾರಿಗೆ ವೆಚ್ಚಗಳು | | 65,11,425 |
| | **ಒಟ್ಟು-1** | | **6,40,22,053** |
| | ಓ.ಟಿ.ಡಿ. 2045-00-105-0-01 | | |
| 13 | 106- ಸಹಾಯ ಧನ | | 1,08,00,000 |
| | **ಒಟ್ಟು-2** | | 1,08,00,000 |
| | **ಒಟ್ಟು (1+2)** | | **7,48,22,053** |

**2002-03 ರಿಂದ 2009-10ರ ತನಕದ ಖರ್ಚು ವೆಚ್ಚದ ತುಲನಾತ್ಮಕ ವರದಿ.**

| ಕ್ರಮ ಸಂಖ್ಯೆ | ವಾರ್ಷಿಕ ವಿವರ | ಒಟ್ಟು ವೆಚ್ಚ ರೂ.ಗಳಲ್ಲಿ |
|---|---|---|
| 1. | 2002-03 | 2,69,02,232 |
| 2. | 2003-04 | 3,10,24,473 |
| 3. | 2004-05 | 3,61,31,821 |
| 4. | 2005-06 | 3,65,41,594 |
| 5. | 2006-07 | 3,81,73,688 |
| 6. | 2007-08 | 4,58,84,594 |
| 7. | 2008-09 | 9,57,54,446 |
| 8. | 2009-10 | 7,48,22,053 |






### 4 ವಿದ್ಯುತ್ ಅಪಘಾತಗಳು:

2009-10ರಲ್ಲಿ ಒಟ್ಟು 1275 ವಿದ್ಯುತ್ ಅಪಘಾತಗಳು ವರದಿಯಾಗಿದ್ದು, ಅವುಗಳಲ್ಲಿ 447 ಸಂಖ್ಯೆಯು ಮಾನವರಿಗೆ ಮರಣಾಂತಿಕ ಅಪಘಾತಗಳಾಗಿದ್ದು, 403 ಸಂಖ್ಯೆಯು ಪ್ರಾಣಿಗಳಿಗೆ ಮರಣಾಂತಿಕ ಅಪಘಾತಗಳಾಗಿದ್ದು ಮತ್ತು 238 ಸಂಖ್ಯೆಯು ಮಾನವರಿಗೆ ಅಮರಣಾಂತಿಕ ಅಪಘಾತಗಳಾಗಿರುತ್ತವೆ. ಮೇಲ್ಕಂಡ ಎಲ್ಲಾ ವಿದ್ಯುತ್ ಅಪಘಾತಗಳನ್ನು ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003ರ ಸೆಕ್ಷನ್ 161ರ ಅನ್ವಯ ಹಾಗೂ ಭಾರತೀಯ ವಿದ್ಯುಚ್ಛಕ್ತಿ ನಿಯಮ 1956 ರನ್ವಯ ತನಿಖೆ ನಡೆಸಿ, ಅಪಘಾತಗಳು ಮರುಕಳಿಸದಂತೆ ತಡೆಯಲು ಪರಿಹಾರಗಳನ್ನು ತಿಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿರುತ್ತದೆ.

ವಿವಿಧ ರೀತಿಯ ಕೆಲಸಗಳನ್ನು ವಿದ್ಯುತ್ ಸ್ಥಾವರಗಳ ಮೇಲೆ ನಿರ್ವಹಿಸುತ್ತಿದ್ದಾಗ ಸಂಭವಿಸಿರುವ ವಿದ್ಯುತ್ ಅಪಘಾತಗಳು ಮತ್ತು ಅದಕ್ಕಿರುವ ಕಾರಣಗಳ ಅಂಕಿ ಅಂಶಗಳು ಕೆಳಕಂಡಂತಿರುತ್ತವೆ.

### 4.1 ವಿದ್ಯುತ್ ಅಪಘಾತಕ್ಕೆ ಕಾರಣಗಳು:

| ಸಂಖ್ಯೆ | ಕಾರಣಗಳು | ಮಾನವರಿಗೆ | | | | ಪ್ರಾಣಿಗಳು ಮರಣಾಂತಿಕ | ಆನೆಗಳು ಮರಣಾಂತಿಕ | ಬೆಂಕಿ ಅಪಘಾತ | ಒಟ್ಟು |
|---|---|---|---|---|---|---|---|---|---|
| | | ಮರಣಾಂತಿಕ | | ಅಮರಣಾಂತಿಕ | | | | | |
| | | ಇಲಾಖೇತರ | ಇಲಾಖೆ | ಇಲಾಖೇತರ | ಇಲಾಖೆ | | | | |
| **1** | 2 | 3 | 4 | 5 | 6 | 7 | 8 | 9 | **10** |
| **1.** | ವಿದ್ಯುತ್ ವಾಹಕಗಳು ತುಂಡಾಗುವುದರಿಂದ | 78 | 0 | 19 | 0 | 164 | 1 | 23 | **285** |


| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 2. | ಮರದ ಕೊಂಬೆಗಳು ಬೀಳುವುದರಿಂದ | 3 | 0 | 0 | 0 | 5 | 1 | 0 | **9** |
| 3. | ವಿದ್ಯುತ್ ಕಂಬಗಳು ಮುರಿಯುವುದರಿಂದ | 6 | 0 | 5 | 1 | 11 | 0 | 0 | **23** |
| 4. | ವಿದ್ಯುತ್ ಪೂರಿತ ವಾಹಕಗಳ / ಉಪಕರಣಗಳ ಆಕಸ್ಮಿಕ ಸಂಪರ್ಕದಿಂದ | 128 | 16 | 58 | 81 | 26 | 1 | 6 | **316** |
| 5. | ಲೋಹದ ಭಾಗಗಳು ಚೇತನಗೊಳ್ಳುವುದರಿಂದ | 22 | 1 | 3 | 7 | 28 | 0 | 1 | **62** |
| 6. | ಸೋರಿಕೆ ವಿದ್ಯುತ್ ನಿಂದ/ ಗೈ ವೈರ್/ಭೂಸಂಪರ್ಕ ತಂತಿ ಚೇತನಗೊಳ್ಳುವುದರಿಂದ | 26 | 2 | 5 | 4 | 134 | 0 | 0 | **171** |
| 7. | ವಿದ್ಯುತ್ ಮಾಪಕ/ಹಾಫ್ ಪೋಲ್ ವಿದ್ಯುತ್ ನಿಂದ ಚೇತನಗೊಳ್ಳುವುದರಿಂದ | 4 | 0 | 0 | 0 | 1 | 0 | 0 | **5** |
| 8. | ಗ್ರಾಹಕರ ಸ್ಥಾವರಗಳಲ್ಲಿರುವ ವಿದ್ಯುತ್ ವೈಯರಿಂಗ್ ಮತ್ತು ಉಪಕರಣಗಳ ನ್ಯೂನತೆಯಿಂದ | 43 | 0 | 1 | 2 | 4 | 0 | 10 | **60** |
| 9. | ಅನಧಿಕೃವಾಗಿ ತಂತಿ ಬೇಲಿಗಳನ್ನು ಚೇತನಗೊಳಿಸು-ವುದರಿಂದ | 16 | 0 | 0 | 0 | 1 | 10 | 3 | **30** |
| 10. | ಬೇರೆ ಯಾವುದಾದರೂ ಕಾರಣಗಳಿಂದ | 101 | 1 | 20 | 32 | 15 | 1 | 144 | **314** |
| ಒಟ್ಟು | | **427** | **20** | **111** | **127** | **389** | **14** | **187** | **1275** |



**4.2 ವಿವಿಧ ರೀತಿಯ ವಿದ್ಯುತ್ ಸ್ಥಾವರಗಳಲ್ಲಿ ಮಾನವರಿಗೆ ಮತ್ತು ಪ್ರಾಣಿಗಳಿಗೆ ಸಂಭವಿಸಿದ ವಿದ್ಯುತ್ ಅಪಘಾತಗಳ ಅಂಕಿ ಅಂಶಗಳು:**

| ಕ್ರಮ ಸಂಖ್ಯೆ | ಸ್ಥಾವರಗಳು | ಮಾನವರಿಗೆ | | | | ಪ್ರಾಣಿಗಳು ಮರಣಾಂತಿಕ | ಆನೆಗಳು ಮರಣಾಂತಿಕ |
|---|---|---|---|---|---|---|---|
| | | ಮರಣಾಂತಿಕ | | ಅಮರಣಾಂತಿಕ | | | |
| | | ಇಲಾಖೇತರ | ಇಲಾಖೆ | ಇಲಾಖೇತರ | ಇಲಾಖೆ | | |
| 1 | 2 | 3 | 4 | 5 | 6 | 7 | 8 |
| 1 | ವಿದ್ಯುತ್ ಸರಬರಾಜು ಕಂಪನಿ, ವಿದ್ಯುತ್ ಉತ್ಪಾದನೆ ಕಂಪನಿ, ಅನುಮತಿ ಪಡೆದ ವಿದ್ಯುತ್ ಸರಬರಾಜುದಾರರಿಗೆ ಸೇರಿರುವ ಸ್ಥಾವರಗಳು | | | | | | |
| | ಎ) ವಿದ್ಯುತ್ ಉತ್ಪಾದನಾ ಕೇಂದ್ರ | 0 | 0 | 1 | 0 | 0 | 0 |
| | ಬಿ) ಪ್ರಸರಣಾ ಮತ್ತು ವಿತರಣಾ | | | | | | |
| | 1) 11ಕೆವಿ ಮತ್ತು ಮೇಲ್ಪಟ್ಟು | 127 | 15 | 112 | 91 | 97 | 4 |
| | 2) 11 ಕೆವಿ ಗಿಂತ ಕಡಿಮೆ | 268 | 9 | 51 | 37 | 388 | 1 |
| 2 | ಗ್ರಾಹಕರ ಕೈಗಾರಿಕಾ ಸ್ಥಾವರಗಳು | | | | | | |
| | ಎ) ಸರ್ಕಾರಿ/ಅರೆಸರ್ಕಾರಿ/ ಸ್ಥಳೀಯ ಸಂಸ್ಥೆಗಳ ಸ್ವಾಮ್ಯದ ಸ್ಥಾವರ | 1 | 0 | 0 | 0 | 0 | 0 |
| | ಬಿ) ಖಾಸಗಿಯವರ ಮಾಲೀಕತ್ವದಲ್ಲಿ | 12 | 0 | 0 | 2 | 0 | 0 |
| 3 | ಕೈಗಾರಿಕೆಯಲ್ಲದ, ವಾಸದ ಮನೆ, ಕೃಷಿಯ, ವಾಣಿಜ್ಯ ಗ್ರಾಹಕರ ಸ್ವಾಮ್ಯದ ಸ್ಥಾವರ | | | | | | |
| | ಎ) ಸರ್ಕಾರಿ/ಅರೆಸರ್ಕಾರಿ/ ಸ್ಥಳೀಯ ಪ್ರಾಧಿಕಾರಗಳ ಸ್ವಾಮ್ಯದ ಸ್ಥಾವರ | 11 | 0 | 0 | 0 | 0 | 0 |
| | ಬಿ) ಖಾಸಗಿಯವರ ಮಾಲೀಕತ್ವದಲ್ಲಿ | 34 | 0 | 2 | 3 | 17 | 10 |
| | ಒಟ್ಟು | **453** | **24** | **166** | **133** | **502** | **15** |

**4.3 ಕಳೆದ 8 ವರ್ಷಗಳಲ್ಲಿ ಸಂಭವಿಸಿದ ವಿದ್ಯುತ್ ಅಪಘಾತಗಳ ಅಂಕಿ ಅಂಶಗಳು.**






**5. ಪರವಾನಗಿ ಸಲಹಾ ಹಾಗೂ ಪರೀಕ್ಷಾ ಮಂಡಳಿ.**

ವಿದ್ಯುತ್ ಪರವಾನಗಿ ಹಾಗೂ ಪರೀಕ್ಷಾ ಮಂಡಳಿ ತಿಂಗಳಿಗೊಮ್ಮೆ ಸಭೆ ಸೇರಿ, ಹಿಂದಿನ ತಿಂಗಳಿನಲ್ಲಿ ಸ್ವೀಕೃತಗೊಂಡ ಪರವಾನಗಿ ಅರ್ಜಿಗಳನ್ನು ಪರಾಮರ್ಶಿಸಿ, ಹೊಸ ಹಾಗೂ ನವೀಕೃತ ಪರವಾನಗಿಗಳನ್ನು ನೀಡಲಾಗುತ್ತಿದೆ.

2009–10ರ ಸಾಲಿನಲ್ಲಿ ರಾಜ್ಯದಲ್ಲಿ ಹಲವಾರು ವಿದ್ಯುತ್ ಪರವಾನಗಿ ಹಾಗೂ ವಿದ್ಯುತ್ ಮೇಲ್ವಿಚಾರಕರ ಪರವಾನಗಿಯನ್ನು ನೀಡಲಾಗಿದ್ದು, ನೀಡಲಾದ ಪರವಾನಗಿಗಳ ಅಂಕಿ ಅಂಶಗಳ ಸಂಕ್ಷಿಪ್ತ ವಿವರಗಳನ್ನು ಕೆಳಕಂಡಂತೆ ತೋರಿಸಲಾಗಿದೆ.

**5.1. ವಿದ್ಯುತ್ ಗುತ್ತಿಗೆದಾರರ ಅಂಕಿ ಅಂಶಗಳು**

| ಕ್ರಮ ಸಂಖ್ಯೆ | ವಿವರ | 2009–10ರ ಅವಧಿಯಲ್ಲಿ ವಿತರಿಸಲಾದ ಪರವಾನಗಿ ಮತ್ತು ರಹದಾರಿಗಳ ಸಂಖ್ಯೆ | 31–03–2010ಕ್ಕೆ ಅಂತ್ಯಗೊಂಡಂತೆ ವಿತರಿಸಲಾದ ಪರವಾನಗಿ ಮತ್ತು ವಿದ್ಯುತ್ ಮೇಲ್ವಿಚಾರಕರ ರಹದಾರಿಗಳ ಒಟ್ಟು ಸಂಖ್ಯೆ |
|---|---|---|---|
| 1 | 2 | 3 | 4 |
| 1. | ವಿದ್ಯುತ್ ಗುತ್ತಿಗೆದಾರರ ಪರವಾನಗಿ | | |
| | ವರ್ಗ – 1 | **2717** | **24111** |
| | ವರ್ಗ – 2 | **318** | **14287** |
| | ವರ್ಗ – 3 | **3** | **14** |
| 2. | ವಿಶೇಷ ತಂತಿ ರಹದಾರಿಗಳು | **1** | **51** |
| 3. | ವಿದ್ಯುತ್ ಮೇಲ್ವಿಚಾರಕರು (ಔದ್ಯಮಿಕ) | **1476** | **27098** |
| 4. | ವಿದ್ಯುತ್ ಮೇಲ್ವಿಚಾರಕರು (ಗಣಿ) | **3** | **685** |
| 5. | ತಂತಿ ರಹದಾರಿಗಳು | **2984** | **42588** |

**5.2 ವಿದ್ಯುತ್ ಮೇಲ್ವಿಚಾರಕರು (ಔದ್ಯಮಿಕ/ಗಣಿ) ಮತ್ತು ತಂತಿ ರಹದಾರಿಗಳ ಪರೀಕ್ಷೆ : 2009–10** ನೇ ಸಾಲಿನ ಪರೀಕ್ಷೆಗಳನ್ನು ಮೇ–ಜೂನ್ 2010ರಲ್ಲಿ ಬೆಂಗಳೂರು, ಹುಬ್ಬಳ್ಳಿ, ಹಟ್ಟಿ ಕೇಂದ್ರಗಳಲ್ಲಿ ನಡೆಸಲಾಯಿತು. ಪರೀಕ್ಷಾ ಮಾಹಿತಿಗಳು ಇಂತಿವೆ.

### (5.2.1) ವಿದ್ಯುತ್ ಮೇಲ್ವಿಚಾರಕರು (ಔದ್ಯಮಿಕ) ಪರೀಕ್ಷೆ :

| | | | |
|---|---|---|---|
| 1 | ಪರೀಕ್ಷೆಗೆ ಹಾಜರಾದ ಒಟ್ಟು ಅಭ್ಯರ್ಥಿಗಳು | 137 | 84 |
| 2 | ಪರೀಕ್ಷೆಯಲ್ಲಿ ಉತ್ತೀರ್ಣರಾದ ಒಟ್ಟು ಅಭ್ಯರ್ಥಿಗಳು | 0 | 1 |
| 3 | ಫಲಿತಾಂಶ ಶೇಕಡಾವಾರು | 0 | 1.19 % |

### (5.2.2) ವಿದ್ಯುತ್ ಮೇಲ್ವಿಚಾರಕರು (ಗಣಿ) ಪರೀಕ್ಷೆ

| | | |
|---|---|---|
| 1 | ಪರೀಕ್ಷೆಗೆ ಹಾಜರಾದ ಒಟ್ಟು ಅಭ್ಯರ್ಥಿಗಳು | 32 |
| 2 | ಪರೀಕ್ಷೆಯಲ್ಲಿ ಉತ್ತೀರ್ಣರಾದ ಒಟ್ಟು ಅಭ್ಯರ್ಥಿಗಳು | 5 |
| 3 | ಫಲಿತಾಂಶ ಶೇಕಡಾವಾರು | 15.625 % |

### (5.2.3) ತಂತಿ ರಹದಾರಿಗಳ ಪರೀಕ್ಷೆ:–

| | | | |
|---|---|---|---|
| 1 | ಪರೀಕ್ಷೆಗೆ ಹಾಜರಾದ ಒಟ್ಟು ಅಭ್ಯರ್ಥಿಗಳು | 450 | 248 |
| 2 | ಪರೀಕ್ಷೆಯಲ್ಲಿ ಉತ್ತೀರ್ಣರಾದ ಒಟ್ಟು ಅಭ್ಯರ್ಥಿಗಳು | 216 | 153 |
| 3 | ಫಲಿತಾಂಶ ಶೇಕಡಾವಾರು | 48 % | 61.69 % |

* * * * *